ದಿನಾಂಕ 12.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಸಿ.ಎಸ್.ಎಲ್ ರವರಿಂದಃ-**

1ನೇ ಪ್ರತಿವಾದಿ ನನ್ನ ತಂಗಿ. ಅವರ ವಿವಾಹವು ಯಾವ ದಿನಾಂಕದಂದು ಆಗಿರುತ್ತದೆ ಎಂಬುದು ನನಗೆ ನಿಖರವಾಗಿ ನೆನಪಿಲ್ಲ. 1ನೇ ಪ್ರತಿವಾದಿಯ ಗಂಡ 1991 ರಲ್ಲಿ ಮೃತರಾಗಿರುತ್ತಾರೆ. ನನಗೆ ಕಾಫಿ ತೋಟ ಮತ್ತು ಗದ್ದೆ ಇದೆ. 1ನೇ ಪ್ರತಿವಾದಿಗೆ ಆಸ್ತಿ ಇದ್ದು, ಎಷ್ಟು ಎಕರೆ ಇದೆ ಎಂಬುದು ನನಗೆ ನಿಖರವಾಗಿ ಗೊತ್ತಿಲ್ಲ. ದಾವಾಸ್ವತ್ತುಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 4 ರಲ್ಲಿ ತಿಳಿಸಿರುವಂತೆ ಕ್ರಯಪತ್ರವಾಗಿರುವುದಿಲ್ಲ ಬದಲಿಗೆ ವಿಭಾಗಪತ್ರವಾಗಿರುತ್ತದೆ. ನನಗೆ ಈ ದಾವೆಯ ಬಗ್ಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸಹಾ 1ನೇ ಪ್ರತಿವಾದಿಯು ನನ್ನ ತಂಗಿಯಾಗಿರುವುದರಿಂದ ಆಕೆಗೆ ಅನುಕೂಲಮಾಡಿಕೊಡುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 10.11.2004 ರಂದು ವಾದಿ ಮತ್ತು ಪ್ರತಿವಾದಿಗಳು ಹಾಗೂ ಅವರ ಕುಟುಂಬಸ್ತರ ನಡುವೆ ಕ್ರಯಪತ್ರವಾಗಿದ್ದು, ನಾನು ಸದರಿ

ಕ್ರಯಪತ್ರದ ವಿಚಾರಗಳನ್ನು ತಿಳಿದುಕೊಂಡು ಸಾಕ್ಷಿದಾರನಾಗಿ ಸಹಿ ಮಾಡಿದ್ದರೂ ಸಹಾ, ಸದರಿ ದಾಖಲೆ ವಿಭಾಗಪತ್ರವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.